ಅಸಲು ದಾವಾ ನಂ.271/20217

ಪಿ ಡಬ್ಲ್ಯೂ: 2

(ಸಾಕ್ಷಿಯನ್ನು ಈ ದಿನ ದಿನಾಂಕ.17.06.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಃ ಶ್ರೀ ಆರ್ ಆಯ್ ಎಮ್ ವಕೀಲರಿಂದಃ

1. ನಾನು ಹತ್ತನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿಗೆ ವಾದಿಯ ಸಹೋದರರು ಎಷ್ಟು ಜನ ಎಂದು ಕೇಳಲಾಗಿ ವಾದಿ ಮತ್ತು ಖಾಜಸಾಬ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದು ತಾಯಿ ತೀರಿಕೊಂಡಿರುತ್ತಾಳೆ. ಸಾಕ್ಷಿಗೆ ವಾದಿಯ ಎಲ್ಲಿ ಮನೆ ಮಾಡಿಕೊಂಡಿರುತ್ತಾರೆ ಎಂದರೆ ಊರಿನಲ್ಲಿಯೇ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ವಾದಿಯ ಮನೆ ಕಲ್ಲಿನ ಮನೆ ಇರುತ್ತದೆ ಎಂದರೆ ಸಾಕ್ಷಿ ಆರ್ ಸಿ ಸಿ ಮನೆ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಮನೆಯಲ್ಲಿ ವಾದಿ ಒಬ್ಬರೇ ಇರುತ್ತಾರೆ ಎಂದರೆ ಸರಿ.

2. ವಾದಿ ಹಾಗೂ 1 ನೇ ಪ್ರತಿವಾದಿ ಮನೆತನಕ್ಕೆ ಸರ್ವೇ ನಂಬರ 328/1 ಎ ಕ್ಷೇತ್ರ 4 ಎಕರೆ 30 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. 2005-06 ರಲ್ಲಿ ವಾದಿ 328/1 ಎ ಕ್ಷೇತ್ರ 4 ಎಕರೆ 30 ಗುಂಟೆ ಜಮೀನು 1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಬದಲಾಗ ಆರ್ ಸಿ ಸಿ ಮನೆ ಪಡೆದುಕೊಂಡು ಜಮೀನನ್ನು 1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ಸದರಿ ಜಮೀನನ್ನು 1 ನೇ ಪ್ರತಿವಾದಿಗೆ ನೀಡಿದ ನಂತರ ವಾದಿ ಯೇ ತಹಶೀಲ್ದಾರ ಕಛೇರಿಗೆ ತನ್ನ ಹೆಸರನ್ನು ಕಡಿಮೆ ಮಾಡಿ 1 ನೇ ಪ್ರತಿವಾದಿಯ ಹೆಸರನ್ನು ಸದರಿ ಜಮೀನಿಗೆ

ನಮೂದಿಸುವಂತೆ ವರದಿ ನೀಡಿದ್ದರುಾ ಎಂದರೆ ಸರಿಯಲ್ಲ. ವರದಿ ಹಾಗೂ ವಾಟ್ನಿ ಪತ್ರವನ್ನು ಎರಡು ಸೇರಿ ವಾದಿ ತಹಶೀಲ್ದಾರ ಕಛೇರಿಗೆ ನೀಡಿದ್ದರೂ ಎಂದರೆ ಸರಿಯಲ್ಲ. ಸದರಿಯವರು ವರದಿ ನೀಡಿದ ನಂತರ ವಾದಿಯ ಹೆಸರನ್ನು ಕಡಿಮೆ ಮಾಡಿ 4 ಎಕರೆ 30 ಗುಂಟೆ ಜಮೀನಿನ ಮಾಲಿಕತ್ವಕ್ಕೆ ಸಂಬಂಧಿಸಿದಂತೆ ದಾಖಲಾತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತವೆ ಎಂದರೆ ಸಾಕ್ಷಿ ಖೊಟ್ಟಿಯಾಗಿ ದಾಖಲು ಮಾಡಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಅದರಂತೆ ಎಮ್ ಆರ 74/2005/06 ಡ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ಖೊಟ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

4. 2005-06 ರಿಂದ ದಾಖಲಾತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದಾದ ನಂತರ ಆತನೇ ಸದರಿ ಜಮೀನಿನ ಮಾಲಿಕ ಮತ್ತು ಕಬ್ಜೆದಾರ ಇರುತ್ತಾರೆ ಎಂದರೆ ಸಾಕ್ಷಿ ದಾಖಲಾತಿ ಖೊಟ್ಟಿ ಮಾಡಿಕೊಂಡಿದ್ದು ಆತನೇ ಸಧ್ಯ ಕಬ್ಜೆಯಲ್ಲಿರುತ್ತಾರೆ ಎಂದು ನುಡಿದಿರುತ್ತಾರೆ.

5. ನಂತರದಲ್ಲಿ 2014 ರಲ್ಲಿ 1 ನೇ ಪ್ರತಿವಾದಿ ಸರ್ವೆ ನಂಬರ 328/1 ಎ ಕ್ಷೇತ್ರ 4 ಎಕರೆ 30 ಗುಂಟೆ ಜಮೀನನ್ನು ತನ್ನ ಹೆಂಡತಿಯ ಹೆಸರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ಅದರಂತೆ ಆತನ ಹೆಂಡತಿ ಸದರಿ ಜಮೀನಿನ ಮಾಲಿಕಳು ಮತ್ತು ಕಬ್ಜೆಯಲ್ಲಿರುತ್ತಾರೆ ಎಂದರೆ ಸಧ್ಯ ಅವರೇ ಇರುತ್ತಾರೆ ಎಂದು ನುಡಿದಿರುತ್ತಾರೆ. ನಂತರದಲ್ಲಿ 1 ನೇ ಪ್ರತಿವಾದಿ ತನ್ನ ಹೆಂಡತಿಯ ಕಬ್ಜೆಗೆ ತಕರಾರು ಮಾಡಿದಂತೆ ಆತನ ಹೆಂಡತಿ ನ್ಯಾಯಾಲಯಕ್ಕೆ ಬಂದು ಅಸಲು ದಾವಾ ನಂಬರ 231/17 ಸಲ್ಲಿಸಿದ್ದು ದಿ 10-07-17 ರಂದು ರಾಜೀ ಮಾಡಿಕೊಂಡಿರುತ್ತಾರೆ

ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಹಾಗಾಗಿ ಸರ್ವೇ ನಂಬರ 328/1ಎ ಕ್ಷೇತ್ರ 4 ಎಕರೆ 30 ಗುಂಟೆ ಜಮೀನಿನಲ್ಲಿ ವಾದಿಗೆ ಹಕ್ಕು ಇರುವುದಿಲ್ಲ ಸದರಿ ಜಮೀನಿನ ಮಾಲಿಕರು ಮತ್ತು ಕಬ್ಜೆದಾರರು 1 ನೇ ಹೆಂಡತಿ ಇರುತ್ತಾಳೆ ಎಂದರೆ ಸರಿಯಲ್ಲ.

6. ವಾದಿ ತನ್ನ ಸಹೋದರರಿಗೆ ಮಾಡಿಕೊಟ್ಟಂತಹ ವಾಟ್ನಿ ಪತ್ರ ಆತನ ತಾಯಿ ಹಾಗೂ ಸಹೋದರಿಯರ ಸಂಪೂರ್ಣ ಒಪ್ಪಿಗೆ ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಜಮೀನಿನಲ್ಲಿ ವಾದಿಗೆ ಯಾವುದೇ ಹಕ್ಕು ಹಿಸಾಸಕ್ತಿ ಇರುವುದಿಲ್ಲ ಆತನ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2 ನೇ ಪ್ರತಿವಾದಿಯು ಏಕ ಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.